- ಸ್ಥಾನೀಯ ಬೀಜಗಳನ್ನು ಮಾತ್ರ ಬಳಸಬೇಕು. ಹೈಬ್ರೀಡ್ ಅಥವಾ ಜೈವತಂತ್ರಜ್ಞಾನದ ಬೀಜಗಳನ್ನು ಉಪಯೋಗಿಸಬಾರದು. ಬೀಜದ ಗುಣಮಟ್ಟ ಚೆನ್ನಾಗಿರಬೇಕು. ಕೊಳೆತ, ಹಾಳಾದ ಬೀಜಗಳನ್ನು ಬಳಸಬಾರದು.

ಏರುತ್ತಿರುವ ಜಾಗತಿಕ ಮತ್ತು ಸ್ಥಾನೀಯ ತಾಪಮಾನದ ಇಳಿಕೆಗಾಗಿ, ನಿರಂತರ ಅರಣ್ಯನಾಶ ತಡೆಗಟ್ಟಲು, ಬರಗಾಲ ಬಾರದಂತೆ ಇರಲು ಮತ್ತು ತೀವ್ರತೆ ತಡೆಯಲು, ಉತ್ತಮ ಮಳೆಗಾಗಿ, ಹಸಿರು ಪ್ರದೇಶವನ್ನು ಹೆಚ್ಚಿಸಲು, ಮಣ್ಣಿನ ಕೊರತೆ ಮತ್ತು ಸಾರ ರಕ್ಷಿಸಲು, ಬೆಟ್ಟಗುಡ್ಡ ಉಳಿಸಲು, ವಿನಾಶದ ಅಂಚಿನಲ್ಲಿದ್ದ ಜೀವವೈವಿಧ್ಯ (ಪ್ರಾಣಿ, ಪಶುಪಕ್ಷಿ)ಗಳ ಉಳುವಿಗಾಗಿ, ಎಲ್ಲಕ್ಕಿಂತ ಮಿಗಿಲಾಗಿ ಪ್ರಕೃತಿಸ್ನೇಹಿ ಜೀವನದ ಸೂತ್ರಧಾರ ನೀವಾಗಲು ಒಣ ಹರಟೆಯ ಮಾತುಗಳಿಗಿಂತ ಕೃತಿಯ ಮೂಲಕ ಉತ್ತರ ನೀಡಿ. ಪ್ರಕೃತಿಗಾಗಿ ಒಂದು ದಿನ ಮೀಸಲಿಟ್ಟು ಭಾಗವಹಿಸಿ ಮತ್ತು ಬಂಧು-ಮಿತ್ರರಿಗೆ ಭಾಗವಹಿಸಲು ಪ್ರೇರಣೆ ನೀಡಿ. ಮನುಷ್ಯ ಸಹಜವಾಗಿ ತಲುಪದ ಪ್ರದೇಶಗಳಾದ ಬೆಟ್ಟ, ದಿನ್ನೆ, ಗುಡ್ಡಗಳು, ಪೊದೆಗಳು, ಮುಳ್ಳು ಕಂಟಿ ಬೆಳೆದ ಜಾಗ ಸೇರಿದಂತೆ ಮಳೆಯಾಧಾರಿತ ಭೂಪ್ರದೇಶಗಳು, ಹೆದ್ದಾರಿಗಳ ಬದಿಗಳು, ಕೆರೆ ಬದು ಮತ್ತು ನದಿದಡಗಳು, ಶಿಕ್ಷಣಸಂಸ್ಥೆಗಳಿಗಾಗಿ, ದೇವಸ್ಥಾನ ಮತ್ತು ಉದ್ಯಾನವನಕ್ಕಾಗಿ ಮೀಸಲಾಗಿಟ್ಟ ಪ್ರದೇಶಗಳಲ್ಲಿ ಬೀಜದುಂಡೆಗಳನ್ನು ಸಹಜವಾಗಿ ಬಿಸಾಡಬಹುದು. ಭಾನುವಾರ ಸೇರಿದಂತೆ ರಜಾದಿನಗಳ 3-4 ಗಂಟೆಗಳನ್ನು ಸ್ನೇಹಿತರೊಡನೆ ಸೇರಿ ಹಸಿರು ಬೆಳೆಸಲು ಬೇಕಾಗುವ ಬೀಜದುಂಡೆ ತಯಾರಿಸಲು ಅಥವಾ ಬಿಸಾಡಲು ಉಪಯೋಗಿಸಿ ರಜೆದಿನದ ಸೋಮಾರಿತನ ಜಾಡಿಸಿ ರಜಾದ ಮಜಾವನ್ನು ವೈಶಿಷ್ಟ್ಯಮಯವಾಗಿ ಅನುಭವಿಸಿ. ಆನಂದಿಸಿ.

ಈಗಾಗಲೇ ಬೀಜದುಂಡೆ ತಯಾರಿಸುವ ಕಾರ್ಯಾಗಾರವನ್ನು ಸ್ವಯಂಸೇವಾ ಸಂಘಟನೆಗಳು, ಶಿಕ್ಷಣಸಂಸ್ಥೆಗಳು ಮಾಡುತ್ತಿವೆ. ಉತ್ತಿಷ್ಠ ಭಾರತ, ಭಾರತೀಯ ಕಿಸಾನ್ ಸಂಘ, ಸ್ವದೇಶಿ ಜಾಗರಣ ಮಂಚ್, ಸಮರ್ಥ ಭಾರತ, ಜನಚೇತನಾ ಟ್ರಸ್ಟ್ ಮೈಸೂರುಗಳಂತಹ ಸ್ವಯಂಸೇವಾ ಸಂಸ್ಥೆಗಳು ಮುಂಚೂಣಿಯಲ್ಲಿವೆ. ಅವುಗಳ ಸ್ಥಾನೀಯ ಘಟಕಗಳ ಜೊತೆ ಕೈಜೋಡಿಸಿ ಕಾರ್ಯಕ್ರಮ ರೂಪಿಸಿ ಅಥವಾ ಅವುಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸಿ. ಹಸಿರು ಬೆಳೆಸುವ ಆಸಕ್ತಿ ಇರುವ ಸ್ವಯಂಸೇವಾ ಸಂಸ್ಥೆಗಳು ಬೀಜದುಂಡೆ ಸಿದ್ಧಪಡಿಸಿ ಬಿಸಾಡುವ ಆಂದೋಲನದಲ್ಲಿ ಭಾಗವಹಿಸಬಹುದು. ಗಡಿಯಲ್ಲಿ ಕಣ್ಣಲ್ಲಿ ಎಣ್ಣೆ ಹಾಕಿ ಕೊಂಡು ದಿನದ 24ಗಂಟೆಗಳ ಕಾಲ ಗಡಿ ಕಾಯುವ ಯೋಧನಷ್ಟೇ ಮಹತ್ವದ ಕೆಲಸ ಪ್ರಾಣವಾಯು ನೀಡುವ ಹಸಿರು ರಕ್ಷಿಸುವುದು. ರಾಷ್ಟ್ರ ರಕ್ಷಣೆಯಲ್ಲಿ ಪರಿಸರ ರಕ್ಷಣೆಯ ಯೋಧರಾಗ ಬನ್ನಿ. ಬನ್ನಿ! ದೇಶಭಕ್ತಿಯನ್ನು ನಿತ್ಯ ಆಚರಿಸುವವರಾಗಿ. ಅಂದು ಇಂದು ಎನ್ನದೇ ಇಂದೇ ಭಾಗವಹಿಸಿ! ಧನ್ಯರಾಗಿ. ಹಸಿರು ಉಳಿಸಿ ಉಸಿರು ನೀಡಿ.

## ಬೀಜದುಂಡೆ ತಯಾರಿಸುವ ಸರಳ ವಿಧಾನ

- ಬೀಜದುಂಡೆ ಸಿದ್ಧಪಡಿಸಲು ಆಯಾ ಪ್ರದೇಶದಲ್ಲಿ ಸಿಗುವ ಮಣ್ಣು ತೆಗೆದು ಜರಡಿ ಹಿಡಿದು ಬಳಸಬೇಕು. ನಂತರ ಅದಕ್ಕೆ ಶೇ. 20ರಷ್ಟು ಸಗಣಿಯನ್ನು (ಆಕಳು, ಎತ್ತು, ಎಮ್ಮೆ, ಕೋಣದ ಸಗಣಿ) ನೀರಲ್ಲಿ ಕಲಸಿ ಉಂಡೆ ಕಟ್ಟಲು ಬೇಕಾದ ತೇವಾಂಶ ಇರುವಂತೆ ಜರಡಿ ಹಿಡಿದ ಮಣ್ಣಿಗೆ ಸೇರಿಸಬೇಕು. ಹದವಾಗಿ ಕಲಸಬೇಕು. ರೋಗನಿರೋಧಕ ಶಕ್ತಿ ಹೆಚ್ಚಿಸಲು ಗೋಮೂತ್ರ (ಲಭ್ಯವಿದ್ದಲ್ಲಿ) ಸೇರಿಸಬಹುದು.
- ಹದ ಮಾಡಿದ ಮಣ್ಣಿನ ಮಧ್ಯೆ ಒಂದು ಬೀಜ ಇಟ್ಟು ಬೀಜದ ಆಕಾರಕ್ಕೆ ತಕ್ಕಂತೆ ಗುಂಡಗೆ ಗೋಲಿ ಆಕಾರದಲ್ಲಿ ಬೀಜದುಂಡೆ ಮಾಡಬೇಕು ಮತ್ತು ಚೆನ್ನಾಗಿ ಒಣಗಿಸಿ ಶೇಖರಿಸಿಟ್ಟುಕೊಳ್ಳಬೇಕು. ಪರಿಸರಸ್ನೇಹಿ ಚೀಲಗಳಲ್ಲಿ ಹಾಕಿಟ್ಟುಕೊಳ್ಳಬೇಕು.
- ಮಳೆಗಾಲದ ಮುಂಗಾರು ಮಳೆ ಬಂದನಂತರ ಬೀಜದುಂಡೆಗಳನ್ನು ತಮ್ಮ ಊರಿನ ಹತ್ತಿರದ ಒಣ ಪ್ರದೇಶದಲ್ಲಿ ಬಿಸಾಡಿದರೆ ಸಾಕು ಬೀಜ ಮೊಳಕೆಯೊಡೆದು ತಾನಾಗಿ ಮರವಾಗಿ ಬೆಳೆಯುತ್ತದೆ.
- ನಮ್ಮ ಪ್ರದೇಶದಲ್ಲಿ ಸಿಗುವ ಮರಗಳ ಬೀಜಗಳಲ್ಲಿ (ಉದಾ ಬೇವು, ಮಾವು, ಹುಣಸೆ, ಹೊಂಗೆ, ಜಾಲಿ, ನೇರಳೆ, ಅಂಟುವಾಳ, ಸೀತಾಫಲ, ಚಿಕ್ಕು, ನಿಂಬೆ, ಕರಿಬೇವು, ಸೀಬೆ, ಬನ್ನಿ, ಬಿಲ್ವಪತ್ರೆ, ಬದಾಮಿ, ಇತ್ಯಾದಿ) ಉತ್ತಮವಾದವುಗಳನ್ನು ಆಯ್ದುಕೊಳ್ಳಬೇಕು. ಮನೆಯಲ್ಲಿ ನಾವು ನಿತ್ಯ ಬಳಸುವ ನಿಂಬೆ, ಮಾವು, ಕಿತ್ತಳೆ, ಮೋಸಂಬಿ ಇತ್ಯಾದಿ ಹಣ್ಣುಗಳ ಬೀಜಗಳನ್ನು ಒಣಗಿಸಿ ರಕ್ಷಿಸಿ ಇಟ್ಟುಕೊಂಡು ಬಳಸಬಹುದು.



ಉತ್ತಿಷ್ಠ ಭಾರತದ ಕಾರ್ಯಕರ್ತರು ಬೀಜದುಂಡೆ ತಯಾರಿಯಲ್ಲಿ ತೊಡಗಿರುವುದು